ದಿನಾಂಕ: 30–08–2024 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆ

6. ಪ್ರಕಾಶ ಶಿವಮೂರ್ತಿ ಹೊಸಮನಿ ನನ್ನ ವಿರುದ್ಧ ದೂರು ನೀಡಿದ್ದು, ಸದರಿ ದೂರು ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಪೋಲಿಸರು ನನ್ನನ್ನು ದಸ್ತಗಿರಿ ಮಾಡಬಹುದು ಮತ್ತು ಒಂದು ವೇಳೆ ದಸ್ತಗಿರಿ ಮಾಡಿದ್ದಲ್ಲಿ ನನ್ನ ಮಾನಕ್ಕೆ ಹಾನಿಯಾಗುವ ಸಂಭವ ಹಾಗೂ ನನ್ನ ಸ್ವತಂತ್ರಕ್ಕೆ ಧಕ್ಕೆ ಆಗಬಹುದು ಎಂದು ತಿಳಿದು ನಾನು 6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಕಲಂ 438 ಸಿ.ಆರ್.ಪಿ.ಸಿ ಅಡಿಯಲ್ಲಿ ನೀರಿಕ್ಷಣಾ ಜಾಮೀನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ನನಗೆ ದಿಃ 12.05.2022 ರಂದು ನೀರಿಕ್ಷಣಾ ಜಾಮೀನು ಮಂಜೂರು ಮಾಡಿದ್ದು ಇರುತ್ತದೆ.

7. ತದನಂತರ ಆರೋಪಿತನು ಸಲ್ಲಿಸಿದ ಪ್ರಕರಣವು ಖಾನಾಪೂರ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಾ ಇದ್ದು, ಆರೋಪಿತನು ನನ್ನ ವಿರುದ್ಧ ಸುಳ್ಳು ದೂರು ದಾಖಲೆ ಮಾಡಿದ್ದರಿಂದ ಸಾರ್ವಜನಿಕರ ಮಧ್ಯೆ ಹಾಗೂ ನಮ್ಮ ಸಹದ್ಯೋಗಿಗಳ ಮಧ್ಯೆ ನನಗೆ ಮನಸ್ಸಿ ಗೆ ತುಂಬಾ ನೋವುಂಟಾಗಿದ್ದು ದೂರು ದಾಖಲಾದ ನಂತರ ನನ್ನ ಸಹದ್ಯೋಗಿಗಳು ನನ್ನನ್ನು ಕೀಳರಿಮೆಯಿಂದ ನೋಡುತ್ತಿದ್ದರಿಂದ ನನ್ನ ಮನಸ್ಸಿಗೆ ನೋವುಂಟಾಗಿ ಮತ್ತು ನನ್ನ ಮಾನಕ್ಕೆ ಹಾನಿಯಾಗಿರುತ್ತದೆ.

8. ಆರೋಪಿತನು ನನ್ನ ವಿರುದ್ಧ ಸುಳ್ಳು ದೂರು ದಾಖಲಿಸಿದ್ದರಿಂದ ನನಗೆ ಮಾನಸಿಕ ಒತ್ತಡವಾಗಿ ಆರೋಗ್ಯದಲ್ಲಿ ವ್ಯತ್ಯಾಸವಾಗಿ ನಾನು ಈಗ ಅನಾರೋಗ್ಯದಿಂದ ಬಳಲುತ್ತಿದ್ದೇನೆ. ನನಗೆ ಹೃದಯ ರೋಗ ಕಾಯಿಲೆ ಇದ್ದು, ಆದ ಕಾರಣ ಕೆ.ಎಲ್.ಇ ಆಸ್ಪತ್ರೆಯ ವೈದ್ಯರಾದ ಡಾಃ ಸಮೀರ್ ಅಂಬಾರ ಇವರ ಹತ್ತಿರ ಚಿಕಿತ್ಸೆ ಪಡೆದುಕೊಂಡಿರುತ್ತೇನೆ . ಅದೇ ರೀತಿ ದಿಃ 19.04.2022 ರಂದು ನಾನು ಚಿಕಿತ್ಸೆಗಾಗಿ ಒಳರೋಗಿಯಾಗಿ ಕೆ.ಎಲ್.ಇ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ದಿಃ26.04.2022 ರಂದು ವೈದ್ಯರು ನನಗೆ PTCA with stunting to proximal LCX to

OMI, Proximal to MID LAD and left main to proximal LAD ಮಾಡಿರುತ್ತಾರೆ. ನಾನು ಶಸ್ತ್ರ ಚಿಕಿತ್ಸೆಗೆ ಒಳಪಡುವ ಮುಂಚೆ ನಾನು ಹೃದ್ರೋಗ ಕಾಯಿಲೆಗೆ ಸಂಬಂಧಿಸಿದಂತೆ ಭಾತೆ ಆಸ್ಪತ್ರೆಯಲ್ಲಿರುವ ಡಾಃಅಮಿತ ಎಸ್. ಭಾತೆ ಇವರ ಹತ್ತಿರ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಕೆ.ಎಲ್.ಇ ಆಸ್ಪತ್ರೆಯಲ್ಲಿ ಡಾಃಸಮೀರ್ ಅಂಬಾರವರ ಹತ್ತಿರ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಕೇಸ್ ಶೀಟ್‌ಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿಃ 1 ಎಂದು, ಅದೇ ರೀತಿ ಭಾತೆ ಆಸ್ಪತ್ರೆಯಲ್ಲಿರುವ ಡಾಃಅಮಿತ ಎಸ್. ಭಾತೆ ಇವರ ಹತ್ತಿರ ಚಿಕಿತ್ಸೆಯನ್ನು ಪಡೆದುಕೊಂಡ ಬಗ್ಗೆ ಕೇಸ್ ಶೀಟ್‌ಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿಃ 2 ಎಂದು ಗುರುತಿಸಲಾಯಿತು.

9. ಶುಭಾರತ ಕಾರ್ಡಿಯಾಕ ಕ್ಲಿನಿಕನಲ್ಲಿ ಡಾಃಪವಾರ ಹತ್ತಿರ ನನ್ನ ಹೃದ್ರೋಗಕ್ಕೆ ಸಂಬಂಧಿಸಿದಂತೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಶುಭಾರತ ಕಾರ್ಡಿಯಾಕ ಕ್ಲಿನಿಕನಲ್ಲಿ ಡಾಃಪವಾರ ಹತ್ತಿರ ಚಿಕಿತ್ಸೆಯನ್ನು ಪಡೆದುಕೊಂಡ ಬಗ್ಗೆ ಕೇಸ್ ಶೀಟ್‌ಗಳನ್ನು ಹಾಜರುಪಡಿಸಿದ್ದು, ಅದನ್ನು ನಿಪಿಃ 3 ಎಂದು ಗುರುತಿಸಲಾಯಿತು. ಶಾರದಾ ಕ್ಲಿನಿಕ ಕರಾಡೆಯಲ್ಲಿ ವೈದ್ಯರ ಹತ್ತಿರ ಎನ್ಜಿಯೋಗ್ರಾಫಿ ಮಾಡಿಸಿಕೊಂಡಿರುತ್ತೇನೆ. ಸದರಿ ಆಸ್ಪತ್ರೆಯ ದಾಖಲೆಗಳನ್ನು ನಿಪಿಃ 4 ಎಂದು ಗುರುತಿಸಿಲಾಯಿತು.

10. ನನ್ನದು ಹಿಂದೂ ವಡ್ಡರ ಜಾತಿಯಾಗಿದ್ದು, ಸದರಿ ಜಾತಿಯ ಪರಿಶಿಷ್ಟ ಜಾತಿಯಾಗಿರುತ್ತದೆ. ಅದಕ್ಕೆ ಸಂಬಂಧಿಸಿದಂತೆ ನನ್ನ ಜಾತಿ ಪ್ರಮಾಣ ಪತ್ರವನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿದ್ದ ಜಾತಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಆದ ಕಾರಣ ಸದರಿ ಜಾತಿ ಪ್ರಮಾಣ ಪತ್ರವನ್ನು ನಿಪಿಃ 5 ಎಂದು ಗುರುತಿಸಿಲಾಯಿತು.

11. ಆರೋಪಿತನು ನನ್ನ ಮೇಲೆ ದೂರು ದಾಖಲೆ ಮಾಡಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಕೆಲವೊಂದು ಧೃಡೀಕೃತ ದಾಖಲೆಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

1. ಧೃಡೀಕೃತ ಪ್ರಥಮ ವರ್ತಮಾನ ವರದಿ ದಿಃ 19.04.2022.

2.ಧೃಡೀಕೃತ ಪಿರ್ಯಾದಿ ದಿಃ 19.04.2022ದಿ

3. ಧೃಡೀಕೃತ ದೋಷಾರೋಪಣೆ ಪಟ್ಟಿ.

4. ಕಚೇರಿಯಿಂದ ವಜಗೊಳಿಸಿದ ಆದೇಶ ದಿಃ 06.04.2022.

5. ನನ್ನನ್ನು ವಾಪಸ್ ಕೆಲಸಕ್ಕೆ ತೆಗೆದುಕೊಂಡ ಆದೇಶ ದಿಃ 13.09.2022.

ಸದರಿ ದಾಖಲೆಗಳನ್ನು ಕ್ರಮವಾಗಿ ನಿಪಿಃ 6 ರಿಂದ ನಿಪಿಃ 10 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಸ್ವಪ್ರಮಾಣೀಕೃತ ಹೇಳಿಕೆಯನ್ನು ಮಾಡಿಸಲು ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.